**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ.98/2018**

**ದಿನಾಂಕಃ 02.08.2021**
**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)**

**ಪ್ರಾ.ಸಾಃ 4 (ಚಾ.ಸಾ.3 )**

| | | |
|---|---|---|
| **ಹೆಸರು** | **ಃ** | **ಆದರ್ಶ ಗೌಡ** |
| **ಗಂಡನ ಹೆಸರು** | **ಃ** | **ರಾಜಣ್ಣ** |
| **ವಯಸ್ಸು** | **ಃ** | **23 ವರ್ಷ** |
| **ಉದ್ಯೋಗ** | **ಃ** | **ವಿದ್ಯಾರ್ಥಿ** |
| **ವಾಸ ಸ್ಥಳ** | **ಃ** | **ದಂಡೇನಹಳ್ಳಿ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 ಮತ್ತು 2 ನನ್ನ ತಾಯಿ-ತಂದೆಯರು. ನನಗೆ ಚಾಸಾ.4 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ 2 ರಿಂದ 5ನೇ ಆರೋಪಿಗಳು ನನಗೆ ಗೊತ್ತು.

2. ತಾಃ 13.11.2014 ರಂದು ಸಂಜೆ 4-5 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿಗಳು ನಮ್ಮ ಜಮೀನಿನಲ್ಲಿ ರಾಗಿ ಪೈರು ಕುಯ್ದ ವಿಚಾರದಲ್ಲಿ ರಾಮಣ್ಣ, ತಾಯಮ್ಮ, ಪಟೇಲಾ, ಕವಿತಾ ಮತ್ತು ಗೌಡಯ್ಯ ಇವರುಗಳು ನಮ್ಮ ಮೇಲೆ ಗಲಾಟೆ ಮಾಡಿದ್ದರು. ಆ ಸಮಯದಲ್ಲಿ ಜನರು ಬಂದು ಗಲಾಟೆ ಬಿಡಿಸಿದರು.

3. ಮರುದಿನ ಬೆಳಿಗ್ಗೆ 10.30-11 ಗಂಟೆ ಸಮಯದಲ್ಲಿ ನಾನು ಹಾಗೂ ನನ್ನ ತಂದೆ ಅಶ್ವಥ್ಥ ಕಟ್ಟೆಯ ಮೇಲೆ ಕುಳಿತಿದೆವು. ಸದರಿ ಅಶ್ವಥ್ಥ ಕಟ್ಟೆ ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ಆ ಸಮಯದಲ್ಲಿ ನಮ್ಮ ತಾಯಿ ನಮ್ಮ ಮನೆಯಲ್ಲಿದ್ದರು. ಸದರಿ ಸ್ಥಳಕ್ಕೆ ರಾಮಣ್ಣ, ತಾಯಮ್ಮ, ಪಟೇಲಾ, ಕವಿತಾ ಮತ್ತು ಗೌಡಯ್ಯ ಇವರುಗಳು ಬಂದರು. ಆ ಸಮಯದಲ್ಲಿ ಆರೋಪಿ ರಾಮಣ್ಣ ಹಾಗೂ ಗೌಡಯ್ಯನ

ಕೈಗಳಲ್ಲಿ ಕಬ್ಬಿಣದ ರಾಡುಗಳು ಇದ್ದವು. ಆರೋಪಿ ಪಟೇಲ ಉ. ಮಂಜುನಾಥನ ಕೈಯಲ್ಲಿ ದೊಣ್ಣೆ ಇದ್ದಿತ್ತು. ಹಿಂದಿನ ದಿನ ಆದ ಗಲಾಟೆಯ ವಿಚಾರದಲ್ಲಿ ಸದರಿ ಆರೋಪಿಗಳು ಬಂದು ನಮಗೆ ಹೊಡೆದರು. ಆರೋಪಿ ರಾಮಣ್ಣ ಹಾಗೂ ಗೌಡಯ್ಯ ಕಬ್ಬಿಣದ ರಾಡುಗಳಿಂದ ನನ್ನ ತಂದೆಯ ತಲೆ ಹಾಗೂ ಬೆನ್ನಿಗೆ ಹೊಡೆದರು. ಆರೋಪಿ ಮಂಜುನಾಥ ಉ. ಪಟೇಲ ಮರದ ದೊಣ್ಣೆಯಿಂದ ನನ್ನ ತಂದೆಯ ತಲೆ ಹಾಗೂ ಬೆನ್ನಿಗೆ ಮೂಗಿನ ಬಳಿ ಹೊಡೆದರು. ನನ್ನ ತಲೆಗೆ ಆರೋಪಿ ಗೌಡಯ್ಯ ಕಬ್ಬಿಣದ ರಾಡಿನಿಂದ ಹೊಡೆದರು. ಆರೋಪಿ ಪಟೇಲ ದೊಣ್ಣೆಯಿಂದ ನನ್ನ ತಲೆಗೆ ಹೊಡೆದನು. ಆರೋಪಿ ರಾಮಣ್ಣ ಕಬ್ಬಿಣದ ರಾಡಿನಿಂದ ನನ್ನ ತಲೆಗೆ ಹೊಡೆದರು. ನನ್ನ ತಾಯಿ ಬಂದು ನಮ್ಮನ್ನು ಬಿಡಿಸಿಕೊಂಡರು. ಆ ಸಮಯದಲ್ಲಿ ಆರೋಪಿ ಗೌಡಯ್ಯ ರಾಡಿನಿಂದ ನನ್ನ ತಾಯಿಯ ಬಲ ಮಂಡಿಗೆ ಹೊಡೆದರು. ಗಲಾಟೆಯ ಸಮಯದಲ್ಲಿ ಚಿಕ್ಕೇಗೌಡ, ರಾಮಚಂದ್ರ ಇದ್ದು ನಂತರ ಊರಿನವರು ಬಂದು ಗಲಾಟೆ ಬಿಡಿಸಿದರು.

**4.** ಸಾಕ್ಷಿ ಎಂ.ಒ. 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**5.** ಆ ಸಮಯದಲ್ಲಿ ಆರೋಪಿಗಳು ಇವರನ್ನು ಬಿಡಬಾರದು ಮುಗಿಸಬೇಕು ಎಂದು ಹೇಳಿದರು. ಬೆಂಗಳೂರು ಆಸ್ಪತ್ರೆಗೆ ಹೋಗಿ ನಾವು ಚಿಕಿತ್ಸೆ ಪಡೆದಿರುತ್ತೇವೆ.

**6.** ಘಟನೆಯ ಸಂದರ್ಭದಲ್ಲಿ ನಾನು, ನನ್ನ ತಂದೆ ಧರಿಸಿದ್ದ ಬಟ್ಟೆಗಳಿಗೆ ರಕ್ತವಾಗಿತ್ತು. ಸಾಕ್ಷಿಯು ಎಂ.ಒ.4 ರಿಂದ 6 ನ್ನು ನೋಡಿ ಗುರುತಿಸಿರುತ್ತಾರೆ. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು ಃ</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

ದಿನಾಂಕ : **09.08.2021**
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು:</u>

(ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ತಾ: 02.08.2021 ರಂದು ಈ ಸಾಕ್ಷಿಯ ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಈ ದಿನಕ್ಕೆ ಮುಂದೂಡಿದ್ದು, ಈ ದಿನ ಆರೋಪಿ ಪರ ವಕೀಲರು ಕಾಲಾವಕಾಶ ನೀಡಲು ಯಾವುದೇ ಸಮಂಜಸವಾದ ಕಾರಣವನ್ನು ನೀಡಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)

<u>ಮರುವಿಚಾರಣೆ : ಇಲ್ಲ.</u>
<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ರಮಾ ಬಿ.ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ.